ಪ್ರತಿಬಿಂಬ

IIMRD JOURNALS

**PRATIBIMBA –Multidisciplinary Kannada Research Journal of IIMRD**
**ISSN: 2582-2284**
**Vol-5, Special Issue-1, Sep-Oct, 2023, Pp. 121-125.**
**©IIMRD, Mysuru.**
**www.iimrd.com**

# ಕನ್ನಡ ಸಾಹಿತ್ಯದಲ್ಲಿ ವೀರಶೈವ ಸೂಫಿಗಳು

**ಡಾ. ಕವಿತ ಕೆ. ಎಂ.***

*ಸಹಾಯಕ ಪ್ರಾಧ್ಯಾಪಕರು, ಇತಿಹಾಸ ವಿಭಾಗ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಮಾಲೂರು.

***ಸಾರಾಂಶ: (Abstract)***

*ಸೂಫಿ ಪಂಥವು ಮಧ್ಯ ಏಷ್ಯಾದ ಇಸ್ಲಾಮಿ ಜಗತ್ತಿನಲ್ಲಿ ಹುಟ್ಟಿದ ಒಂದು ದರ್ಶನ. ಸೂಫಿಸಂ ಮೂಲತಃ ಒಂದು ತತ್ವವಾಗಿದೆ, ಅನುಭಾವ ಪಂಥವಾಗಿದೆ. ಕರ್ನಾಟಕದಲ್ಲಿ ಸೂಫಿಗಳೊಡನೆ ಹೆಚ್ಚು ನಿಕಟವರ್ತಿಗಳಾಗಿದ್ದವರೆಂದರೆ ಉತ್ತರ ಕರ್ನಾಟಕದ ವೀರಶೈವರು ಮತ್ತು ದಲಿತರು. ಶರಣ ಸಂಸ್ಕೃತಿ 12ನೇ ಶತಮಾನದಲ್ಲಿ ಉತ್ತರ ಕರ್ನಾಟಕದಲ್ಲಿ ಆಳವಾಗಿ ಬೇರುಬಿಟ್ಟಿದ್ದು. ಸಾಮಾನ್ಯ ಜನರ ಮನೋಭಾವನೆಯಲ್ಲಿ ಅಗಾಧವಾದ ದೂರಗಾಮಿ ಬದಲಾವಣೆ ಮಾಡಿದ್ದಿತು. 14ನೇ ಶತಮಾನದಲ್ಲಿ ಸೂಫಿಪಂಥ ದಕ್ಷಿಣ ಭಾರತ ಪ್ರವೇಶಿಸಿದಾಗ ಜನರು ಅವರ ವಿಚಾರಧಾರೆಗಳನ್ನು ಉದಾರವಾಗಿ ಬರಮಾಡಿಕೊಂಡರು. ಸೂಫಿಗಳ ಹಾಗೂ ವೀರಶೈವರ ನಿಲುವುಗಳು ಸರಳತೆ, ಸಮಾನತೆ, ಮಾನವೀಯತೆ, ಢಾಂಭಿಕ ಭಕ್ತಿಯ ಖಂಡನೆ, ಸ್ಥಾವರ ವಿರೋಧ ಮುಂತಾದವು ಈ ಎರಡು ಪಂಥಗಳ ನಡುವೆ ಉತ್ತಮ ಸಂಬಂಧ ಕಲ್ಪಿಸಿತು. ಇದರ ಪರಿಣಾಮವೆಂದರೆ ಕೆಲವೊಂದು ಸಂದರ್ಭಗಳಲ್ಲಿ ಶರಣ ಪರಂಪರೆಯ ನಾಥೀಕರಣ, ಸೂಫಿಕರಣ ಮತ್ತು ಸೂಫಿಗಳ ಶರಣೀಕರಣ. ಬಲಾದಿಸಿದ್ದ, ಕೊಡೇಕಲ್ ಬಸವಣ್ಣ, ಶಿರಹಟ್ಟಿ ಫಕೀರೇಶ, ಸಾವಳಗಿ ಶಿವಲಿಂಗ, ಧಾರವಾಡದ ಚಿಕ್ಕಪ್ಪಯ್ಯ, ದೀನದಾರ್ ಚನ್ನಬಸವೇಶ್ವರ ಇವು ಕರ್ನಾಟಕದ ಸೂಫಿಕರಣದ ಕೆಲವು ಪರಂಪರೆಗಳು. ಈ ಸಂಶೋಧನಾ ಲೇಖನದಲ್ಲಿ ವೀರಶೈವ ಸೂಫಿ ಕವಿಗಳ ಕುರಿತ ಕೆಲವು ಪದ್ಯಗಳ ಉಲ್ಲೇಖವನ್ನು ಮಾಡಲಾಗಿದೆ.*

***ಮುಖ್ಯಪದಗಳು (Keywords)*** *ಕನ್ನಡ ಸಾಹಿತ್ಯ, ಸೂಫಿಗಳು, ವೀರಶೈವ, ಸಿದ್ಧಾಂತ, ಅಭಿವ್ಯಕ್ತಿ, ಸೂಫಿಗಳು.*

**ಪೀಠಿಕೆ**

ಸೂಫಿ ಪಂಥವು ಮಧ್ಯ ಏಷ್ಯಾದ ಇಸ್ಲಾಮಿ ಜಗತ್ತಿನಲ್ಲಿ ಹುಟ್ಟಿದ ಒಂದು ದರ್ಶನ. ಸೂಫಿಸಂ ಮೂಲತಃ ಒಂದು ತತ್ವವಾಗಿದೆ, ಅನುಭಾವ ಪಂಥವಾಗಿದೆ. ಭಾರತದಲ್ಲಿ ಮಧ್ಯಯುಗೀನ ಸಮಾಜ ಇಸ್ಲಾಂನ ಆಕ್ರಮಣಕಾರರ ಪ್ರವೃತ್ತಿಯಿಂದ ಹಲವು ಅನಪೇಕ್ಷಣೀಯ ಸಂಘರ್ಷಗಳಿಗೆ ದಾರಿಯಾಗಿದ್ದಿತು. ಹಾಗಾಗೀ ಸಾಮಾಜಿಕ ಅಭದ್ರತೆ ನೆಲೆಯೂರಿತು. ಅಂತಹ ವೇಳೆಯಲ್ಲಿ ಸೂಫಿ ಸಂತರು ಕೋಮು ಸೌಹಾರ್ದತೆಯ ಸಂಕೇತವಾಗಿ ಪರಿಣಮಿಸಿದರು. ಸೂಫಿಗಳು ಇಸ್ಲಾಂ ಧರ್ಮದ ಸಂತರು. ಭಾರತದಲ್ಲಿ ಇಸ್ಲಾಂ ಧರ್ಮ ರಾಜಕೀಯ ಶಕ್ತಿಗಳ ಮೂಲಕ ಪ್ರವೇಶ ಪಡೆದ ಆಸುಪಾಸಿನಲ್ಲಿಯೇ ಈ ಸಂತರು

*Please cite this article as:* ಡಾ. ಕವಿತ ಕೆ. ಎಂ. (2023). ಕನ್ನಡ ಸಾಹಿತ್ಯದಲ್ಲಿ ವೀರಶೈವ ಸೂಫಿಗಳು. ಪ್ರತಿಬಿಂಬ: *ಮಲ್ಟಿಡಿಸಿಪ್ಲಿನರಿ ಕನ್ನಡ ರೀಸರ್ಚ್ ಜರ್ನಲ್ ಆಫ್ ಐಐಎಂಆರ್‌ಡಿ, 5(1). ಪು.ಸಂ. 121–125.*

ಅನುಭಾವಿಕ, ಆಧ್ಯಾತ್ಮಿಕ, ಅವಕಾಶ ಸದುಪಯೋಗ ಹಾಗೂ ಅಸ್ತಿತ್ವಕ್ಕಾಗಿ ಇಲ್ಲಿಗೆ ಆಗಮಿಸಿದರು. ಸೂಫಿ ಎಂಬ ಪದಕ್ಕೆ ಎರಡು ಅರ್ಥಗಳಿವೆ. ಸೂಫಿ ಎಂದರೆ ಉಣ್ಣೆಯ ಬಟ್ಟೆಯ ನಿಲುವಂಗಿ ಧರಿಸುತಿದ್ದ ಮುಸ್ಲಿಂ ಸಾಧು ಸಂತರು. ಸಾಫ್ ಎಂದರೆ ಪರಿಶುದ್ಧ ನಡೆನುಡಿಯುಳ್ಳವರು ಎಂದರ್ಥ.

**ಸೂಫಿ ಸಿದ್ಧಾಂತದ ಪ್ರಮುಖಾಂಶಗಳು**

ದೇವರೊಬ್ಬನೇ, ಅವನು ಅನಂತ ಮತ್ತು ಅಪ್ರತಿಮ. ದೇವರ ಬಗ್ಗೆ ಅತೀವ ಭಕ್ತಿ, ನಮಾಜಿನಿಂದ ಅಂತಃಶುದ್ಧಿ ಪಡೆದು ದೇವರಲ್ಲಿ ಮನಸ್ಸನ್ನು ಕೇಂದ್ರೀಕರಿಸುವುದು, ದೈವಸಾಕ್ಷಾತ್ಕಾರ. ಇವರ ವಿಶೇಷತೆಗಳೆಂದರೆ; ಉದಾತ್ತ ಧಾರ್ಮಿಕ ಭಾತೃತ್ವ ಮತ್ತು ಸಹಿಷ್ಣುತೆ, ಸಂಗೀತ ಮತ್ತು ನೃತ್ಯಗಳನ್ನೂ ಧಾರ್ಮಿಕ ಚಟುವಟಿಕೆಯಾಗಿಸಿದ್ದು, ವಿಶ್ವದ ಎಲ್ಲಾ ಧರ್ಮ ಪ್ರವಾದಿಗಳನ್ನು ಗೌರವಿಸುವುದು, ಸಂಪ್ರದಾಯಿಕ ಆಚರಣೆಗಳಿಗೆ ವಿರೋದ ಇತ್ಯಾದಿ.

ಕರ್ನಾಟಕದ ಸೂಫಿಗಳು ಎಂದರೆ ಕರ್ನಾಟಕ, ಆಂಧ್ರ ಹಾಗೂ ಮಹಾರಾಷ್ಟ್ರ ರಾಜ್ಯಗಳೊಳಗೆ ಹರಿಯುವ ಕೃಷ್ಣಾ, ತುಂಗಭದ್ರೆ, ಭೀಮಾ ನದಿಗಳ ಸೀಮೆಯು ಇವರ ನಿಜವಾದ ಭೂಮಿಕೆಯೆನ್ನಬೇಕು. ಕರ್ನಾಟಕದ ಪ್ರಮುಖ ಸೂಫಿಗಳೆಂದರೆ; 'ಬಂದೇ ನವಾಜ್', 'ಅಮೀನುದ್ದೀನ್', 'ಮಹಮದ್ ಸರ್ವರ್', 'ಅನ್ವರ್ ಉದ್ದೀನ್', 'ಷೇಕ್ ಅಮೀನುದ್ದೀನ್', 'ಪೀರ್ ಅಗಾಖಾನ್', 'ಸೈಯದ್ ಷಾ ಖಾದ್ರಿ', 'ವಲಿಉಲ್ಲಾಷಾ' ಇತರರು.

ಕರ್ನಾಟಕದಲ್ಲಿ ಸೂಫಿಗಳೊಡನೆ ಹೆಚ್ಚು ನಿಕಟವರ್ತಿಗಳಾಗಿದ್ದವರೆಂದರೆ ಉತ್ತರ ಕರ್ನಾಟಕದ ವೀರಶೈವರು ಮತ್ತು ದಲಿತರು. ಶರಣ ಸಂಸ್ಕೃತಿ 12ನೇ ಶತಮಾನದಲ್ಲಿ ಉತ್ತರ ಕರ್ನಾಟಕದಲ್ಲಿ ಆಳವಾಗಿ ಬೇರುಬಿಟ್ಟಿದ್ದು. ಸಾಮಾನ್ಯ ಜನರ ಮನೋಭಾವನೆಯಲ್ಲಿ ಅಗಾಧವಾದ ದೂರಗಾಮಿ ಬದಲಾವಣೆ ಮಾಡಿದ್ದಿತು. 14ನೇ ಶತಮಾನದಲ್ಲಿ ಸೂಫಿಪಂಥ ದಕ್ಷಿಣ ಭಾರತ ಪ್ರವೇಶಿಸಿದಾಗ ಜನರು ಅವರ ವಿಚಾರಧಾರೆಗಳನ್ನು ಉದಾರವಾಗಿ ಬರಮಾಡಿಕೊಂಡರು. ಸೂಫಿಗಳ ಹಾಗೂ ವೀರಶೈವರ ನಿಲುವುಗಳು ಸರಳತೆ, ಸಮಾನತೆ, ಮಾನವೀಯತೆ, ಢಾಂಭಿಕ ಭಕ್ತಿಯ ಖಂಡನೆ, ಸ್ಥಾವರ ವಿರೋಧ ಮುಂತಾದವು ಈ ಎರಡು ಪಂಥಗಳ ನಡುವೆ ಉತ್ತಮ ಸಂಬಂಧ ಕಲ್ಪಿಸಿತು.

ಇದರ ಪರಿಣಾಮವೆಂದರೆ ಕೆಲವೊಂದು ಸಂದರ್ಭಗಳಲ್ಲಿ ಶರಣ ಪರಂಪರೆಯ ನಾಥೀಕರಣ, ಸೂಫಿಕರಣ ಮತ್ತು ಸೂಫಿಗಳ ಶರಣೀಕರಣ. ಬಲಾದಿಸಿದ್ದ, ಕೊಡೇಕಲ್ ಬಸವಣ್ಣ, ಶಿರಹಟ್ಟಿ ಫಕೀರೇಶ, ಸಾವಳಗಿ ಶಿವಲಿಂಗ, ಧಾರವಾಡದ ಚಿಕ್ಕಪ್ಪಯ್ಯ, ದೀನದಾರ್ ಚನ್ನಬಸವೇಶ್ವರ ಇವು ಕರ್ನಾಟಕದ ಸೂಫಿಕರಣದ ಕೆಲವು ಪರಂಪರೆಗಳು. ಈ ಸಂಶೋಧನಾ ಲೇಖನದಲ್ಲಿ ವೀರಶೈವ ಸೂಫಿ ಕವಿಗಳ ಕುರಿತ ಕೆಲವು ಪದ್ಯಗಳ ಉಲ್ಲೇಖವನ್ನು ಮಾಡಲಾಗಿದೆ.

ಮೂಲತಃ ಸೂಫಿಗಳು ಫಾರಸಿಕರು. ಭಾರತದಲ್ಲಿ ಹುಟ್ಟಿದ ಸೂಫಿಗಳು ಸ್ಥಳೀಯ ಭಾಷೆಗಳನ್ನು ಅಭಿವ್ಯಕ್ತಿಗಾಗಿ ತೊಡಗಿದಾಗಲೂ ಫಾರಸಿಯನ್ನು ಬಿಡಲಿಲ್ಲ. ಕರ್ನಾಟಕದ ಸೂಫಿಗಳು ದಖನಿ–ಮರಾಠಿ–ಕನ್ನಡಗಳನ್ನು ಆಯ್ದುಕೊಂಡರೂ ಫಾರಸಿ ಬಲ್ಲವರಾಗಿದ್ದರು. ಸಂತಸಾಹಿತ್ಯದ ರಚನೆಯಲ್ಲಿ ಒಂದು ಭಾಷೆಯ ರಚನೆಯೊಳಗೆ ಮತ್ತೊಂದು ಭಾಷೆಯ ಪದ ಸಾಲುಗಳು ಸೇರಿಕೊಳ್ಳುವುದು ಹಾಗೂ ಒಂದಕ್ಕಿಂತ

ಹೆಚ್ಚು ಭಾಷೆಗಳು ಒಂದೇ ರಚನೆಯಲ್ಲಿ ಸೇರಿಕೊಳ್ಳುವುದು ಸಾಮಾನ್ಯವಾಗಿದೆ. ಕೆಳಗಿನ ಕೆಲವು ಉಲ್ಲೇಖಗಳು ಸೂಫಿಗಳಾಗಿದ್ದ ವೀರಶೈವ ಸಂತರ ಕುರಿತು ಮಾಹಿತಿ ನೀಡುತ್ತದೆ.

ಸಾವಳಗಿ ಶಿವಲಿಂಗನ ಮೇಲೆ 'ಶ್ರೀಶಿವಲಿಂಗೇಶ್ವರ ಪುರಾಣ' ಎಂಬ ಕಾವ್ಯವನ್ನು 19ನೇ ಶತಮಾನದಲ್ಲಿ ಶಿವಪುರದ ಸಿದ್ದಲಿಂಗ ಕವಿ ಭಾಮಿನಿ ಷಟ್ಪದಿಯಲ್ಲಿ ರಚಿಸಿದ್ದಾನೆ. ಈ ಕಾವ್ಯದಲ್ಲಿ ಸಾವಳಗಿ ಶಿವಲಿಂಗ ಮತ್ತು ಬಂದೇನವಾಜ್‌ರ ನಡುವಿನ ಗುರು ಶಿಷ್ಯ ಸಂಬಂಧವನ್ನು ತಿಳಿಸುತ್ತದೆ. ಈ ಕಾವ್ಯದ ಒಂದು ಪರಿಚ್ಛೇದದಲ್ಲಿ ಬಂದೇನವಾಜ್‌ರ ಉಡುಪಿನ ವರ್ಣನೆ ಮಾಡುತ್ತಾ ಕೇಸರಿ ವಸ್ತ್ರ ಹಾಗೂ ನಾಥಸಿದ್ಧರು ಹಾಕುವ ಉಣ್ಣೆಯ ಹಾರವನ್ನು ಧರಿಸಿದ್ದರು ಎನ್ನುವ ವರ್ಣನೆ ಸಮಕಾಲೀನ ಪರಂಪರೆಗಳ ಸಮನ್ವಯತೆಯ ಬಗ್ಗೆ ತಿಳಿಸುತ್ತದೆ.

**"ಪಿಡಿದು ಎಡಬಲ ಬರುವ ಶಿಷ್ಯರು**

**ಹಿಡಿದು ಮೋರ್ಚಾಮರಗಳಿಂದಲಿ**

**ಕೊಡೆಯ ಟೊಪ್ಪಿಗೆ ಶೈಲೆ ಶಮನಗಳಿಂದಲೊಪ್ಪಿರುತ**

**ಉಡಿಗೆ ಶುಭ್ರವು ಮೆಟ್ಟೆ ಪಾವುಗೆ**

**ತೊಡುಗೆ ಶಿಲೆಮಾನಗಳು ಕಂಠದಿ**

**ಜಡೆಯ ಭಸ್ಮವು ಕೂರ್ಚೆ ಬಂದೇನವಾಜ ಮೆರೆದಿಹನು"**

ಶಿರಹಟ್ಟಿ ಫಕೀರೇಶನಿಗೆ ಸಂಬಂಧಿಸಿದಂತೆ ಫಕೀರೇಶ್ವರ ಪುರಾಣದಲ್ಲಿ ಮಾಹಿತಿ ಕಾಣಬಹುದು. ಇದರ ಪ್ರಕಾರ ಪೂರ್ವಾಶ್ರಮದಲ್ಲಿ ಚೆನ್ನವೀರಯ್ಯನಾಗಿದ್ದ ಫಕೀರೇಶ ಶಿವಯ್ಯ–ಗೌರಮ್ಮ ಎಂಬ ಜಂಗಮ ದಂಪತಿಗಳಿಗೆ ಅನೇಕ ವರ್ಷಗಳು ಸಂತಾನ ಇಲ್ಲದಿದ್ದ ಸಂದರ್ಭದಲ್ಲಿ, ಅಮೀನುದ್ದೀನನ ಹರಕೆ ಹೊತ್ತು ಕೂಸನ್ನು ಅಮೀನ ತನ್ನ ಸಿಸುಮಗನಾಗಿ ಮಾಡಿಕೊಳ್ಳುತ್ತಾನೆ ಹಾಗೂ ದೀಕ್ಷೆ ನೀಡುತ್ತಾನೆ. ದೀಕ್ಷೆ ಕೊಟ್ಟ ಮೇಲೆ ಹೊಸಜನ್ಮ ಆಗುವುದರಿಂದ ಹೆಸರು ಬದಲಾಗುತ್ತದೆ.

**"ಹರಮತೀಯರೊಳುದಿಸಿ ಪಿತೃಗಳು**

**ಕರೆದ ಪೆಸರಂ ಬಿಟ್ಟು, ನಾಣ್ಯದೆ**

ತುರುಕರಿಟ್ಟ ಫಕೀರನೆಂಬಾ ನಾಮಮಂ ಪೊಂದಿ**"** ಪಡೆದ ಮಗು. ಹುಟ್ಟುವ ಮೊದಲ ಮಗುವನ್ನು ಅಮೀನನಿಗೆ ಸಿಸುಮಗನಾಗಿ ಕೊಡುತ್ತೇನೆಂಬ ವಚನವನ್ನು ತಾಯಿ ಮರೆತುಬಿಡುತ್ತಾಳೆ. ಚೆನ್ನವೀರಯ್ಯ ರೋಗದಿಂದ ಸಾಯುತ್ತಾನೆ. ಆದರೆ "ಸತ್ತ ನಿರುತಮುಂ ಪಸುರರುವೆಯಂ ನೆರೆ ಧರಿಸುತ ಶಿಲೇಮಾನ ಮಣಿಯಿಂ ಮೆರೆವನು ಮುಸಲ್ಮಾನರಂದದೆ ಕಾಣದೆ**"** ನಿಮಗೆ ಹಂಪಿಯ ವಿರೂಪಾಕ್ಷ ಪಂಡಿತನು ಮಳೆಯ ಮಲ್ಲೇಶ ಮಾಡಿದ ಮಳೆಯ ಪವಾಡವನ್ನು ಕುರಿತು ಚೆನ್ನಬಸವ ಪುರಾಣದಲ್ಲಿ ವಿವರಿಸಿದ್ದಾನೆ. ಮಳೆ ಮಲ್ಲೇಶ ಎಡೆಯೂರು ಸಿದ್ದಲಿಂಗನ ಏಳುನೂರು ಶಿಷ್ಯರಲ್ಲಿ ಒಬ್ಬನಾಗಿದ್ದು ಸೂಫಿ ಪ್ರಭಾವಕ್ಕೆ ಬಂದವನು.

**"ವರಖಲಿಂದರರೇಳು ನೂರ್ವಗರ್ ಗುರುವಾಗಿ**

**ಹರುಷದಿಂದ ಮಖ್ಖಕ್ಕೆ ಪೋಗಿ ಮಹಿಮೆಯ ತೋರಿ**

**ತುರುಕಾಣ್ಯದೊಳಗನಾವೃಷ್ಟಿ ದೋಷಮಂ ಬಂದು ಪಸರಿಸೆ ಪವಾಡದಿಂದ"**

"ವರುಷಮಂ ಸುರಿಸಿ, ಸುರಿತಾಳನಿಂ ಪೂಜೆಯಂ ಪಿರಿದಾಗಿ ಕೈಗೊಂಡು, ಘನತರದ ಕೀರ್ತಿಯಂ ಧರಿಸಲಂದಂದಿತ್ತ ಮಳೆಯ ಮಲ್ಲೇಶ ನಾಮವನಾಂತನು."" ಮೋನಪ್ಪಯ್ಯನ ವಚನದಲ್ಲಿ ಮಳೆ ಸುರಿಸುವ ಪವಾಡ ಕುರಿತ ವಚನ;

**"ಐನೂರು ಕೋಟಿ ಯೋಜನಕೆ ಕೌಲು ಬಂದಾವು**

**ಧೀನ ಸಯ್ಯದ ಮಹಮ್ಮದನೆ ಸಲಹೆಂಬ ಸಮಯಕ್ಕೆ**

**ಕೌದೀಯ ಬೀಸಿ ಮಳೆಗರೆದ ಬಸವಣ್ಣ"**

ಕಾಡಸಿದ್ದನು ಕೊಲ್ಲಾಪುರದ ಸಿದ್ದಗಿರಿಯಲ್ಲಿದ್ದವನು. ದರ್ವೇಶಿ ಸೂಫಿಗಳು ಸಿದ್ದರ ಜತೆ ಹೆಚ್ಚು ಸಾಮಿಪ್ಯ ಇಟ್ಟಿದ್ದವರು. ಕಾಡಸಿದ್ದನು ವಡಿಗೇರಿ ಗುಡ್ಡದ ಶೇಖಸಲೀಮ ಸೂಫಿ ಒಡನಾಟ ಮತ್ತು ಮಿರ್ಜಿ ಮೀರಾಸಾಹೇಬ ಎಂಬ ಸಂತನ ಜೊತೆ ಗೆಳೆತನದ ಪರಿಣಾಮ ಎಂದರೆ ಸೂಫಿಗಳ ಹಾಗೂ ಶರಣರ ಅನುಭಾವ ಪರಿಭಾಷೆ ಬೆರೆಸಿ ದಖ್ಖನಿ ಮತ್ತು ಕನ್ನಡದಲ್ಲಿ ವಚನಗಳು ರಚನೆಯಾಗಿವೆ.

**"ಕಾಡಸಿದ್ದನ ಈ ವಚನ**
**ಬೆಳ್ಳನ್ನವರ ಭಾಷೆಯ ನುಂಗಿ**
**ಕಂಬಳಿಯವರ ಭಾಷೆಯ ಹಿಂಗಿ**
**ತೃಪ್ತಿಯಾದ ತುರುಕನಂತೆ ತೋರುವವರು"**

ಕಾಡಸಿದ್ದೇಶನ ಹೆಸರಿಸಿರುವ ಅರವತ್ತೊಂದು ಜನ ಶರಣರಲ್ಲಿ ವಲ್ಲಿಯ ಪೀರಣ್ಣ ಒಬ್ಬ ಹಾಗೂ ಮಹಮ್ಮದ್ ಖಾನಯ್ಯ ಮತ್ತೊಬ್ಬ. ಕಾಡಸಿದ್ದನಿ 'ವಲ್ಲಿಯ ಪೀರಣ್ಣಯ್ಯಗಳು ಕಾಯಕವ ಮಾಡಿದ ವಚನ' ಎಂಬ ವಚನಗಳನ್ನು ಬರೆದಿದ್ದಾನೆ. ಇವುಗಳಲ್ಲಿ ಕೆಲವು ದಖನಿಯಲ್ಲಿ, ಕೆಲವು ದಖನಿ ಭೂಯಿಷ್ಠ ಕನ್ನಡದಲ್ಲಿ ಬರೆಯಲಾಗಿದೆ.

ಕಾಡಸಿದ್ಧ ಪರಂಪರೆಯಲ್ಲಿ ಬರುವ ನಮಾಜು ಸಾಹಿಬರು ಹಾಡಿದ ಸಾಹಿಬಣ್ಣನ ಪದವು ನಮಾಜನ್ನು ಕುರಿತು ಆಚರಣೆಗಿಂತ ಅನುಭಾವ ದೊಡ್ಡದು ಎನ್ನುವ ಪದವು ಕೆಳಕಂಡಂತಿದೆ;

**"ನಮಾಜು ಮಾಡಿದನೊ ದಿನದಿನ ನಮಾಜು ಮಾಡಿದೆನೊ**

**ನಮಾಜು ಮನಸ್ಸಿನ ಅವಾಜು ಕೇಳಿ ಸುಮ್ಮನೆ ಚಿತ್ರವು ಗೊತ್ತನಿಲಿಸೀ**

**ನಮಾಜು ಮಾಡಿದೆನೊ ದಿನದಿನ ನಮಾಜು ಮಾಡಿದನೂ**

**ಅಂತರಂಗದ ನಮಾಜು ಸಹಜಿದು ನಿರಂತರ ಮಾಡೋ ಹೊಳೆವೋದು**

**ಭ್ರಾಂತಿಗಳಿಗೆ ತೋರುವದಲ್ಲಾ ಅಂತರ್ಗುರುವಿನ ಪೂಜೆ ಮಾಡಿದವ ಬಲ್ಲ"**

ಮೌಲಾನ ಸಿದ್ದೇಶ್ ದೀನ್ ದಾರ್ ಚನ್ನಬಸವಣ್ಣ ಇಪ್ಪತ್ತನೇ ಶತಮಾನದಲ್ಲಿ ಸ್ಥಾಪಿಸಿದ ದೀನ್ ದಾರ್ ಸಮಾಜ ಸ್ಥಾಪಕ. ತನ್ನನ್ನು ಶರಣ ಬಸವಣ್ಣನ ಅವತಾರವೆಂದು ಭಾವಿಸುತ್ತಾನೆ. ಇವರ ಪಂಥ ಕೊಡೇಕಲ್ ಬಸವಣ್ಣ, ತಿಂತಿಣಿ ಮೋನಪ್ಪ ಇವರ ಕಾಲಜ್ಞಾನ ವಚನಗಳನ್ನು ಪ್ರಮಾಣ ಮಾಡಿಕೊಂಡು, ಆ ವಚನಗಳನ್ನು ಉಲ್ಲೇಖಿಸುತ್ತಾರೆ.

ಕರ್ನಾಟಕದ ವೀರಶೈವ ಸೂಫಿಸಂತರ ಕುರಿತ ಸಾಹಿತ್ಯದಲ್ಲಿ ಪವಾಡ ಸಂಗತಿಗಳು, ಪ್ರಭುತ್ವದ ನಿಲುವನ್ನು ತಮ್ಮ ಅನುಭಾವದಿಂದ ಬದಲಾಯಿಸುವ, ಅರ್ಥರಹಿತ ಆಚರಣೆಗಳನ್ನು ಖಂಡಿಸುವ ವಿಚಾರಗಳನ್ನು ಕಾಣಬಹುದು. ಅದ್ವೈತ ಅಲ್ಲಮನ ವಿಚಾರಗಳ ಸಾಮ್ಯತೆ ಸೂಫಿತತ್ವಗಳಲ್ಲಿಯೂ ಕಾಣಸಿಗುವುದು. ಈ ಸಂತರು ಪ್ರೇಮಭಾವನೆಯಿಂದ ಮಾತ್ರ ಭಗವಂತನನ್ನು ಒಲಿಸಿಕೊಳ್ಳಬಹುದೆಂಬ ನಂಬಿಕೆ, ಧಾರ್ಮಿಕ ಆಚರಣೆಗಳಿಗಿಂತ ಅನುಭಾವ ಭಿನ್ನ ಹಾಗೂ ಶ್ರೇಷ್ಠ ಎಂದು ಸಾರಿದವರು. ತಮ್ಮ ಸರಳತೆಯಿಂದ ಪ್ರಭಾವ ಬೀರುತ್ತ ವಾತಾವರಣವನ್ನು ತಾತ್ವಿಕ ಚರ್ಚೆಗಳಿಂದ ತುಂಬಿದವರಾಗಿದ್ದರು.

**ಪರಾಮರ್ಶನ ಗ್ರಂಥಗಳು**


- ಕಪಟರಾಳ ಕೃಷ್ಣರಾವ್. (1970). ಕರ್ನಾಟಕ ಸಂಸ್ಕೃತಿ ಸಂಶೋಧನೆ, ಉಷಾ ಸಾಹಿತ್ಯ ಮಾಲೆ, ಮೈಸೂರು.
- ಚಿದಾನಂದಮೂರ್ತಿ. ಎಂ. (1987). ಕರ್ನಾಟಕ ಸಂಸ್ಕೃತಿ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.
- ನಾಗೇಗೌಡ. ಎಚ್. ಎಲ್. (1975). ಪ್ರವಾಸಿ ಕಂಡ ಇಂಡಿಯಾ ಸಂ–5, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
- ಸೂರ್ಯನಾಥ ಕಾಮತ್. (ಸಂ). (1972). ಧಾರವಾಡ ಜಿಲ್ಲೆ, ಕರ್ನಾಟಕ ಗ್ಯಾಸೆಟಿಯರ್, ಬೆಂಗಳೂರು.